## ಶಿಕ್ಷಣದ ಹಕ್ಕಿಗಾಗಿ ಜನಾಂದೋಲನಗಳ ಸಮನ್ವಯ (ಪಾಫ್ರೆ)
## ಪಡಿ, ಮಂಗಳೂರು
## 2016-17ರ ಆರ್‌ಟಿಇ ಪರಾಮರ್ಶೆ ವರದಿಯ ಅಂತಿಮೀಕರಣ ಮತ್ತು ಆರ್‌ಟಿಇಯ ಪರಿಣಾಮಕಾರಿ ಅನುಷ್ಠಾನದ ಕುರಿತು

# ರಾಜ್ಯಮಟ್ಟದ ಪ್ರೇರಣಾತ್ಮಕ ಕಾರ್ಯಾಗಾರ

ಶಿಕ್ಷಣ ಮೂಲಭೂತ ಹಕ್ಕಾಗಿದ್ದು ಇದರ ಅನುಷ್ಠಾನಕ್ಕಾಗಿ ಆರ್‌ಟಿಇ ಕಾಯಿದೆ ಜಾರಿಗೆ ಬಂದಿದ್ದು, ಇದನ್ನು ಖಾತ್ರಿಪಡಿಸುವುದಕ್ಕಾಗಿ ಸಮಾನ ಮನಸ್ಕ ರಾಜ್ಯ ಮಟ್ಟದ ವೇದಿಕೆಗಳ ಪ್ರತಿನಿಧಿಗಳನ್ನೊಳಗೊಂಡ ವೇದಿಕೆಯಾದ ಪಾಫ್ರೆ (PAFRE-People's Alliance for Right to Education) ಮೂಲಕ ಈಗಾಗಲೇ ಪ್ರತೀ ವರ್ಷ ಶಿಕ್ಷಣ ಹಕ್ಕುಗಳ ಕಾಯಿದೆಯ ಪರಾಮರ್ಶೆ (Stock Taking) ನಡೆಸುತ್ತಾ ಬಂದಿದೆ. ಇದಕ್ಕೆ ಪೂರಕವಾಗಿ ಕಳೆದ ವರ್ಷ ರಾಜ್ಯದ ವಿವಿಧ ಶಾಲೆಗಳಲ್ಲಿ ಆರ್‌ಟಿಇ ಅನುಷ್ಠಾನದ ಕುರಿತು ವಸ್ತುಸ್ಥಿತಿ (Evidence based) ಅಧ್ಯಯನವನ್ನು ವಿವಿಧ ಸಂಘಟನೆಗಳ ಸಹಭಾಗಿತ್ವದಲ್ಲಿ ಮಾಹಿತಿ ಸಂಗ್ರಹಿಸಲಾಗಿದೆ. ಇದರ ವರದಿಯು ತಯಾರಾಗಿದ್ದು, ಇದನ್ನು ಅಂತಿಮಗೊಳಿಸಿ ಪಾಫ್ರೆ ತನ್ನ ಮುಂದಿನ ಹೆಜ್ಜೆಗಳನ್ನು ಚರ್ಚಿಸುವ ಸಲುವಾಗಿ ದಿನಾಂಕ 30-1-2018ರಂದು ಬೆಂಗಳೂರಿನ ಎಸ್‌ಸಿಎಂ ಹೌಸ್‌ನಲ್ಲಿ ಬೆಳಿಗ್ಗೆ 10.00 ಗಂಟೆಗೆ ಸಮಾಲೋಚನಾ ಕಾರ್ಯಾಗಾರವನ್ನು ಮಗು ಮತ್ತು ಕಾನೂನು ವಿಶ್ವವಿದ್ಯಾನಿಲಯ ಕೇಂದ್ರದ ಡಾ. ನಿರಂಜನಾರಾಧ್ಯರವರ ನೇತೃತ್ವದಲ್ಲಿ ನಡೆಯಿತು.



ಕಾರ್ಯಾಗಾರದಲ್ಲಿ ಡಾ. ನಿರಂಜನಾರಾಧ್ಯರವರು ರಾಜ್ಯದ ವಿವಿಧ ಶಾಲೆಗಳಲ್ಲಿ ಆರ್‌ಟಿಇ ಅನುಷ್ಠಾನದ ಕುರಿತು ವಸ್ತುಸ್ಥಿತಿ (Evidence based) ಅಧ್ಯಯನದ ವರದಿಯಲ್ಲಿ ಕಂಡುಕೊಂಡ ಅಂಶಗಳನ್ನು ಕಾರ್ಯಾಗಾರದಲ್ಲಿ ಮಂಡಿಸಿದರು. ವರದಿಯಲ್ಲಿ ಕಂಡುಕೊಂಡ ಪ್ರಮುಖ ಅಂಶಗಳೆಂದರೆ

1. ಸರಕಾರಿ ಶಾಲೆಗಳಲ್ಲಿ ದಾಖಲಾದ ಹೆಚ್ಚಿನ ಮಕ್ಕಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದು, ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗಿದ್ದಾರೆ.
2. ಅಧ್ಯಯನ ನಡೆಸಿದ 589 ಶಾಲೆಗಳಲ್ಲಿ 158 ಶಾಲೆಗಳು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಸೇರ್ಪಡೆ ಮಾಡುವಲ್ಲಿ ಯಾವುದೇ ಪ್ರಯತ್ನವನ್ನು ನಡೆಸಿಲ್ಲ
3. ಮೂಲಭೂತ ಸೌಕರ್ಯಗಳಿಗೆ ಸಂಬಂಧಪಟ್ಟಂತೆ 589 ಶಾಲೆಗಳಲ್ಲಿ 139 ಶಾಲೆಗಳಿಗೆ ಇನ್ನೂ ಕೂಡಾ ಸರ್ವಋತುಗಳಿಗೆ ಹೊಂದಿಕೊಳ್ಳುವ ಕಟ್ಟಡಗಳ ಕೊರತೆ ಇದೆ

4. ಅಧ್ಯಯನದಲ್ಲಿ ಕಂಡುಕೊಂಡಂತೆ 87 ಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ರಚನೆಯು ನಿಗದಿಪಡಿಸಿದ ನಿಯಮಗಳ ಪ್ರಕಾರ ರಚನೆಯಾಗಿಲ್ಲ. ಮತ್ತು ಹೆಚ್ಚಿನ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಶಾಲಾನಿರ್ವಹಣೆಯಲ್ಲಿ ಯಾವುದೇ ನಿರ್ಣಾಯಕ ಕಾರ್ಯವನ್ನು ನಿರ್ವಹಿಸುತ್ತಿಲ್ಲ.
5. ಅಧ್ಯಯನ ನಡೆಸಿದ 94 ಶಾಲೆಗಳಲ್ಲಿ ಶಿಕ್ಷಣ ಹಕ್ಕು ಕಾಯಿದೆಯು ನಿಗದಿಪಡಿಸಿದ ಶಿಕ್ಷಕ ವಿದ್ಯಾರ್ಥಿ ಅನುಪಾತವನ್ನು ಪಾಲಿಸಲಾಗಿಲ್ಲ ಮತ್ತು ವಿಷಯವಾರು ಶಿಕ್ಷಕರ ಕೊರತೆ ಹೆಚ್ಚಿನ ಶಾಲೆಗಳಲ್ಲಿ ಕಂಡು ಬಂದಿದೆ.

   ಶಿಕ್ಷಣ ಹಕ್ಕು ಕಾಯಿದೆ 2009ರಲ್ಲಿ ಬಂದಿದ್ದರೂ ಇಂದಿಗೂ ಕೂಡಾ ಇದರ ಪರಿಣಾಮಕಾರಿ ಅನುಷ್ಠಾನವಾಗುತ್ತಲ್ಲ ಮತ್ತು ಸರಕಾರಗಳು ಕೂಡಾ ಈ ಕುರಿತು ನಿರ್ಲಕ್ಷ್ಯವನ್ನು ಮಾಡುತ್ತಿದ್ದು ಸಮಾಜದಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಮಕ್ಕಳು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

ಕಾರ್ಯಾಗಾರದಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನ ಮಾಡುವಲ್ಲಿ ವಿವಿಧ ಸಂಘಟನೆಗಳು ಜಂಟಿಯಾಗಿ ಯಾವ ರೀತಿಯಲ್ಲಿ ಕೆಲಸಗಳನ್ನು ಮಾಡಬಹುದು ಎಂಬುದರ ಬಗ್ಗೆ ಚರ್ಚೆಯನ್ನು ನಡೆಸಿ ಮುಂದಿನ ಹೆಜ್ಜೆಗಳ ಬಗ್ಗೆ ಈ ಕೆಳಗಿನ ತೀರ್ಮಾನವನ್ನು ಕೈಗೊಳ್ಳಲಾಯಿತು. ಅದ್ದರಿಂದ ಸಮುದಾಯವು ಭರವಸೆಯನ್ನು ಕಳೆದುಕೊಳ್ಳದಂತೆ ಪ್ರಸ್ತುತ ಪ್ರಾಥಮಿಕ ಶಿಕ್ಷಣದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಹಾಗೂ ಶಿಕ್ಷಣದ ಹಕ್ಕಿಗಾಗಿ ಜನಾಂಧೋಲನವನ್ನು ಗಟ್ಟಿಗೊಳಿಸುವುದು ಪ್ರಮೂಖ ಅಂಶವಾಗಿದೆ. ಅದ್ದರಿಂದ ಆರ್.ಟಿ.ಇ ಪರಿಣಾಮಕಾರಿ ಅನುಷ್ಠಾನ ರಾಜ್ಯದ್ಯಂತ ಭೇರೆ ಭೇರೆ ಜಿಲ್ಲೆಗಳಲ್ಲಿ ಸ್ವತಂತ್ರ್ಯವಾಗಿ ಕಾರ್ಯನಿರ್ವಹಿಸುವ ಆರ್.ಟಿ.ಇ ಕಾರ್ಯಕರ್ತರ ಮೂಲಕ ಸಾರ್ವಜನಿಕ ಸಹಭಾಗಿತ್ವ/ ಸಹಕಾರ ಜತೆ ಜತೆಗೆ ಉಳಿಸಿ ಬೆಳೆಸಿಕೊಂಡು ಹೋಗಬೇಕಾಗಿದೆ. ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ತಮ್ಮ ತಮ್ಮ ಕಾರ್ಯಕ್ಷೇತ್ರದಲ್ಲಿ ಕೈಗೊಂಡ ಮತ್ತು ಅನುಷ್ಠಾನಿಸಲ್ಪಟ್ಟ ಉತ್ತಮ ಯಶೋಗಾಥೆಗಳನ್ನು ಸಂಗ್ರಹಿಸಿ ಒಂದು ಕಡೆ ನೋಡಲು ಸಹಾಯವಾಗಬೇಕು. ಹಾಗೂ ಈ ಯಶೋಗಾಥೆಗಳನ್ನು  ವಕೀಲಿ ವಸ್ತುವಾಗಿ ಬಳಸಿಕೊಳ್ಳುವಲ್ಲಿ ಸಾಧ್ಯವಾಗಬೇಕು ಎನ್ನುವ ಚರ್ಚೆಗಳು ನಡೆದವು.

ಕಾರ್ಯಾಗಾರದಲ್ಲಿ ಕೈಗೊಂಡ ಪ್ರಮುಖ ಅಂಶಗಳು:

1. ಶಾಲಾ ದಾಖಲಾತಿಯಲ್ಲಿ ಪಂಚಾಯತು ಪಾತ್ರವನ್ನು ಹೆಚ್ಚಿಸುವುದು.
2. ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 17ರ ಪ್ರಕಾರ ಶಿಕ್ಷೆ ರಹಿತ ಶಿಕ್ಷಣಕ್ಕೆ ಪ್ರೋತ್ಸಾಹ
3. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಪಾತ್ರಗಳ ಪರಿಣಾಮಕಾರಿ ಅನುಷ್ಠಾನ
4. ಶಾಲಾಭಿವೃದ್ಧಿಯಲ್ಲಿ ಹಳೆವಿದ್ಯಾರ್ಥಿ ಮತ್ತು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಜವಾಬ್ದಾರಿ ಹೆಚ್ಚಳ
5. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆಗೆ ಒಳಗೊಳ್ಳುವಂತೆ ಮಾಡಲು ಇರುವ ವ್ಯವಸ್ಥೆಗಳ ಬಲವರ್ದನೆ.
6. ಶಿಕ್ಷಕರು ಮತ್ತು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ನಡುವೆ ಸಮನ್ವಯತೆಗೆ ಕಾರ್ಯತಂತ್ರ
7. ಶಾಲೆಗಳಲ್ಲಿ ಮಗು ಸ್ನೇಹಿ ಕಲಿಕಾ ವಾತವರಣ ನಿರ್ಮಾಣ ಮಾಡುವಲ್ಲಿ  ಯೋಜನೆಯ ರೂಪಣೆ.

ಈ ಕಾರ್ಯಾಗಾರದಲ್ಲಿ ರಾಜ್ಯ ಮಟ್ಟದ ಸಂಘಟನೆಗಳ ಪ್ರತಿನಿಧಿಗಳ ಹಾಗೂ ತಳ ಮಟ್ಟದಲ್ಲಿ ಅಂದರೆ ಶಾಲಾ ಮಟ್ಟದಲ್ಲಿ ಆರ್‌ಟಿಇ ಕಾಯಿದೆ ಅನುಷ್ಠಾನ ಮಾಡುತ್ತಿರುವ ಕಾರ್ಯಕರ್ತರು ಭಾಗವಹಿಸಿದ್ದು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಕಾರ್ಯಾಗಾರದಲ್ಲಿ ಡಾ. ನಿರಂಜನಾರಾಧ್ಯ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ರೆನ್ನಿ ಡಿಸೋಜ ರವರು ಕಾಯಾಗಾರದ ಬಗ್ಗೆ ಪ್ರಾಸ್ತವಿಕಾ ಮಾತುಗಳನ್ನಾಡಿ ಸ್ವಾಗತಿಸಿದರು  ಮತ್ತು ಈ ವರದಿಯನ್ನು ಅಂತಿಮೀಕರಣಗೊಳಿಸುವಲ್ಲಿ ಸಹಕರಿಸಿದ ಪ್ರಕಾಶ್ ರಾವ್ ಮತ್ತು ವಿಕ್ಟರ್ ತಾವ್ರೋ. ಉಪಸ್ಥಿತರಿದ್ದರು. ಕಸ್ತೂರಿ ಬೋಳುವಾರು ವಂದಿಸಿದರು